ಸ್ಕೂಲಿಗೆ ಕಳಿಸುತ್ತಿದ್ದಳು ಅಮ್ಮ. ಕೆಲವೇ ತಿಂಗಳುಗಳಲ್ಲಿ ಅಮ್ಮನ ಜೊತೆ ಅದೂ ಹೊರಟು ಹೋಯಿತು. ತಾನು ಅಮ್ಮ ಸತ್ತು ತಿಂಗಳಾದರೂ ಸ್ಕೂಲಿನ ಕಡೆ ತಲೆಯೇ ಹಾಕಲಿಲ್ಲ. ಅಪ್ಪನ ಬಲವಂತಕ್ಕೆ ಸ್ವಲ್ಪ ದಿನ ಹೋದೆನಾದರೂ, ಎಂಥದೋ ಡ್ರೆಸ್, ಎಣ್ಣೆ ಕಾಣದ ತಲೆಗೂದಲು. ಹರಿದ ಪುಸ್ತಕಗಳು. ಓದು ತನಗೆ ಆಗಿ ಬರುವುದಿಲ್ಲ ಎಂಬ ಸತ್ಯ ನನಗೆ ಅರಿವಾಗಲು ಬಹಳ ದಿನ ಬೇಕಾಗಲಿಲ್ಲ. ಆದರೆ ಬದುಕಿನ ಶಾಲೆಯಲ್ಲಿ ಅಭದ್ರತೆ, ಹಸಿವು ಕಲಿಸಿದ ಪಾಠ ಸ್ಕೂಲಿನ ಓದಿಗಿಂತ ದೊಡ್ಡದಾಗಿತ್ತು. ಬೆಂಗಳೂರಿನ ಗಲ್ಲಿಗಳು, ಅದರ ತೆರೆಮರೆಯಲ್ಲಿ ಸಾಗುತ್ತಿದ್ದ ಎಷ್ಟೋ ಆಟಗಳು, ಈ ಕ್ಷೇತ್ರದಲ್ಲಿ ಭಯಕ್ಕಿರುವ ಮಹತ್ತ್ವ ಎಲ್ಲವೂ ಅಂಗೈ ನೆಲ್ಲಿಯಂತೆ ಮೈಗೂಡುತ್ತ ಹೋಯಿತು. ನಾನು ಸಣ್ಣ ಪ್ರಮಾಣದ ರೌಡಿ. ಕೆಲವೊಮ್ಮೆ ಸುಖದ ಸುಪ್ಪತ್ತಿಗೆ, ಮತ್ತೆ ಕೆಲವು ಬಾರಿ ಪೊಲೀಸರ ಹೊಡೆತ, ಜೈಲಿನ ನರಕ.

ಈ ಮಧ್ಯೆ ಅಪ್ಪ ಮತ್ತೆ ಮದುವೆಯಾದ. ಚಿಕ್ಕಮ್ಮನಾಗಿ ಬಂದವಳೂ ಒಳ್ಳೆಯವಳೇ. ಅದೆಷ್ಟು ಬಾರಿ ನನ್ನನ್ನು ಅವಳ ಮಡಿಲಲ್ಲಿ ಹುದುಗಿಸಿಕೊಂಡು ನನ್ನನ್ನು ತಿದ್ದಲು ಪ್ರಯತ್ನಿಸಿದಳು! ಆದರೆ, ನನ್ನ ದಾರಿ ಬದಲಾಗಿತ್ತು. ಗುರಿಯೂ ಬದಲಾಗಿತ್ತು. ಹಳೆಯ ಕನಸಿನ ಲೋಕ ಅದೆಷ್ಟೇ ಆಪ್ತವಾಗಿದ್ದರೂ, ನಾನು ಮರಳಿ ಹೋಗಲು ಸಾಧ್ಯವಾಗಲಿಲ್ಲ.

ಇಷ್ಟಾದರೂ ಮನೆಯ ಸೆಳೆತ ನನಗೆ ಕಡಿಮೆಯಾಗಲಿಲ್ಲ. ಆಗಾಗ ಬೇಸರ ಮಾಡಿಕೊಂಡರೂ, ಹೆಚ್ಚಾಗಿ ತೊಂದರೆ ಕೊಡದ ಅಪ್ಪ, ಪ್ರೀತಿಸುವ ಚಿಕ್ಕಮ್ಮ, ಅದಕ್ಕಿಂತ ಹೆಚ್ಚೆಂದರೆ ಪುಟ್ಟ ತಂಗಿ ಗೌರಿ. ಗೌರಿಯ ನೆನಪಾದರೆ ಮನಸ್ಸು ಈಗಲೂ ಆರ್ದ್ರವಾಗುತ್ತದೆ. ಅವಳಿಲ್ಲ ಅಂದರೆ ಬದುಕೇ ಇಲ್ಲ ಅಂದು ಕೊಂಡಿದ್ದೆ. ಅವಳೂ ತನ್ನ ಮುದ್ದಾದ ದನಿಯಲ್ಲಿ ನನ್ನನ್ನು ಅಣ್ಣಾ ಅಂತಲೇ ಕರೆಯುತ್ತಿದ್ದದ್ದು. ಅವಳಿಗೆ ಚಾಕೊಲೇಟ್‌ಗಳು ಅಂದರೆ ಪ್ರಾಣ.

ನಾನೂ ಬೆಳೆದೆ. ಆಗೀಗ ಪೊಲೀಸರು ನನ್ನನ್ನು ಹುಡುಕಿಕೊಂಡು ಮನೆಗೆ ಬರುತ್ತಿದ್ದರು. ಮನೆಯ ಯಾರಿಗೂ ತೊಂದರೆಯಾಗಬಾರದೆಂದು ನಾನೇ ಸ್ವಲ್ಪ ಸ್ವಲ್ಪವಾಗಿ ಮನೆಯಿಂದ ದೂರಾದೆ. ಆಗೀಗ ಮನೆಗೆ ಬಂದರೂ, ಚಿಕ್ಕಮ್ಮನಿಗೊಂದಿಷ್ಟು ದುಡ್ಡು, ಮನೆಯ ಎಲ್ಲರಿಗೂ ಬಟ್ಟೆ, ಗೌರಿಗಂತೂ ಏನು ಕೇಳುತ್ತಾಳೋ ಅದೆಲ್ಲ. ಅವರಿಗೆ ಸ್ವಂತದ್ದೊಂದು ಮನೆ ಮಾಡಿಕೊಡಬೇಕೆಂಬ ಆಸೆ ಇತ್ತು. ಆದರೆ, ಯಾವುದೋ ಕೊಲೆ ಆಪಾದನೆ ಹೊತ್ತು, ಐದಾರು ವರ್ಷ ಜೈಲು ಸೇರಿದೆ. ನಂತರ ಹೊರಬಂದರೂ ನನ್ನ ಮನೆ, ಅವರ ವಿಳಾಸ ಕಣ್ಣಿಗೆ ಬೀಳಲೇ ಇಲ್ಲ. ಯಾರೋ ಗೌರಿಗೆ ಮದುವೆಯಾಯ್ತು ಅಂದರು. ಅಪ್ಪನಿಗೆ ಹುಷಾರಿಲ್ಲದೆ ಅಪ್ಪ ಅಮ್ಮ ಇಬ್ಬರೂ ಊರು ಬಿಟ್ಟರು ಎಂದರು. ಎಷ್ಟು ಪ್ರಯತ್ನಪಟ್ಟರೂ ಅವರು ಮತ್ತೆ ಸಿಗಲೇ ಇಲ್ಲ.

ನನ್ನ ಗುರು ನನಗೆ ಹಿತವಚನ ಹೇಳಿದ: 'ನೋಡು ಕುಮಾರ, ದೇವರು ನಮ್ಮ ಬದುಕನ್ನು ಹೇಗೆ ಸೃಷ್ಟಿಸುತ್ತಾನೆ ಅಂದರೆ, ಎಂದೂ ಎರಡು ದೋಣಿಯಲ್ಲಿ ಕಾಲಿಟ್ಟು ಪ್ರಯಾಣ ಮಾಡದ ಹಾಗೆ. ನೀನು ರೌಡಿಯಾದರೆ ಸಂಸಾರ ಕಟ್ಟಿಕೊಳ್ಳಬೇಡ, ಸಂಸಾರ ಬೇಕೆಂದರೆ ರೌಡಿತನ ಬಿಟ್ಟು ಬಿಡು.' ನಾನು ರೌಡಿತನ ಬಿಡಲಿಲ್ಲ. ಬಿಡಲು ಸಾಧ್ಯವೂ ಇರಲಿಲ್ಲ. ಅದೊಂದೇ ಕಸುಬು ನನಗೆ ಗೊತ್ತಿದ್ದು. ನಾನು ಅವರ ಎರಡನೆಯ ಸಲಹೆಯನ್ನು ಆಯ್ದುಕೊಂಡೆ. ಮದುವೆಯಾಗಲಿಲ್ಲ. ಸಂದರ್ಭ ಬಂದ ಹಾಗೆಲ್ಲ ಹಲವಾರು ಹೆಣ್ಣುಗಳು ನನ್ನ ಬದುಕಿನಲ್ಲಿ ಬಂದು ಹೋದವೇನೋ ನಿಜ, ನಾನು ಯಾವುದಕ್ಕೂ ಅಂಟಿಕೊಳ್ಳಲಿಲ್ಲ; ಅದು ಕೊರತೆ ಎಂದೇನೂ ಅನ್ನಿಸಲಿಲ್ಲ. ಎಂದೋ ಒಮ್ಮೊಮ್ಮೆ ಮಾತ್ರ ಮರೆಯಾದ ಅಪ್ಪ, ಚಿಕ್ಕಮ್ಮ, ಗೌರಿ ಎಲ್ಲ ನೆನಪಾಗಿ ಬಿಟ್ಟೂ ಬಿಡದೆ ಕಾಡಿದರು. ದೇವರು ಏಕೋ ನನ್ನ ಕಥೆಯನ್ನು ಕೇವಲ ಸರಳರೇಖೆಯಾಗೇ ಬರೆದ. ನಾನೂ ನನ್ನ ಮನೆಯಲ್ಲೇ